# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಡಗು–ಮಡಿಕೇರಿ

## SC No. 41/2024

| | | | |
|---|---|---|---|
| ಸಾಕ್ಷಿದಾರರ ಹೆಸರು | : | **ಡಾ. ಕಿಶೋರ್ ಕುಮಾರ್ ಡಿ.ಜಿ** | **PW – 14** |
| ತಂದೆಯ ಹೆಸರು | : | **ಗೋಪಾಲ್** | **CW – 20** |
| ವಯಸ್ಸು | : | **53 ವರ್ಷ** | |
| ವೃತ್ತಿ | : | **ವೈದ್ಯಾಧಿಕಾರಿ, ಜಿಲ್ಲಾ ಆಸ್ಪತ್ರೆ, ಮಡಿಕೇರಿ** | |
| ವಾಸ | : | **ಕುಶಾಲನಗರ** | |

**ಸಾಕ್ಷಿಯನ್ನು ದಿನಾಂಕ 09–10–2025 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರಿಂದಃ**

1. ನಾನು ಅಕ್ಟೋಬರ್ 2017 ರಿಂದ ವೈದ್ಯಾಧಿಕಾರಿ ಆಗಿ ಜಿಲ್ಲಾ ಆಸ್ಪತ್ರೆ ಮಡಿಕೇರಿಯಲ್ಲಿ ಕೆಲಸ ಮಾಡುತ್ತಿದ್ದೇನೆ.

2. ದಿನಾಂಕ 26.11.2023 ರಂದು ಆರೋಪಿ ಉತ್ತಪ್ಪ, ವಯಸ್ಸು 42 ವರ್ಷ ಇವರು ಭರತ್ ಇವರ ಜೊತೆ ಆಸ್ಪತ್ರೆಗೆ ಚಿಕಿತ್ಸೆಗಾಗಿ ಬಂದಿದ್ದು, ಸದರಿಯವರನ್ನು ಪರೀಕ್ಷೆ ಮಾಡಿದಾಗ ಈ ಕೆಳಕಂಡ ಗಾಯಗಳು ಕಂಡುಬಂದಿರುತ್ತವೆ.

(1). Lacerated wound measuring 8 cm x 2 cm x bone deep present on the left parietal area.

(2). Lacerated wound measuring 3 cm x 2 cm x bone deep present on left knee.

(3). Swelling of the dorsal aspect of left hand and wrist.

(4). Multiple abrasion on he right side of chest 3 in number, each measuring 3 cm x 1 cm each.

(5). Multiple abrasion over the left iliac–crest over the area of 5 cm x 2 cm.

3. Patient was admitted in the hospital, in my opinion injuries No.1 to 5 are simple in nature. Accordingly, I issued wound certificate, the wound certificate is marked as **Ex.P.26** and signature of the witness is marked as **Ex.P.26(a)**.

**ಪಾಟೀ ಸವಾಲು– ಆರೋಪಿ ಪರ ವಕೀಲರಾದ ಶ್ರೀ. ಓ.ಎಸ್.ಸಿ ರವರಿಂದಃ**

1. ಆರೋಪಿ ಉತ್ತಪ್ಪನ ಜೊತೆ ಭರತ್ ಬಂದಿದ್ದರು, ಅವರು ಅಲ್ಲದೆ ಬೇರೆಯವರು ಬಂದ ಬಗ್ಗೆ ನನಗೆ ನೆನಪಿಲ್ಲ. ಗಾಯದ ಪ್ರಮಾಣಪತ್ರ ನನ್ನ ಹಸ್ತಾಕ್ಷರದಲ್ಲಿ ಇರುತ್ತದೆ. History of assault i.e., assault by his father ಎಂದು ನಾನು ಗಾಯದ ಪ್ರಮಾಣಪತ್ರದಲ್ಲಿ ಬರೆದಿರುತ್ತೇನೆ. ಸದರಿ ಮಾಹಿತಿಯನ್ನು ಭರತ್ ಈತನು ಕೊಟ್ಟಿದ್ದನು.

2. ಗಾಯದ ಪ್ರಮಾಣಪತ್ರದಲ್ಲಿ ಬರೆದ ಎಲ್ಲಾ ಗಾಯಗಳು ನೆಲದ ಮೇಲೆ ಬಿದ್ದರೆ ಆಗುವ ಸಾಧ್ಯತೆ ಇರುವುದಿಲ್ಲ. ಸಾಕ್ಷಿ ಗಾಯದ ಸಂಖ್ಯೆ 1 ನೆಲದ ಮೇಲೆ ಬಿದ್ದರೆ ಆಗುವ ಸಾಧ್ಯತೆ ಇರುವುದಿಲ್ಲ ಎಂದು ಹೇಳುತ್ತಾರೆ. ಮೇಲೆ ಹೇಳಿದ ಗಾಯಗಳು ಕತ್ತಿಯಿಂದ ಆಗುವ ಸಾಧ್ಯತೆ ಇಲ್ಲ ಎಂದರೆ ಸರಿಯಲ್ಲ. ನಾನು ಗಾಯಾಳುವಿಗೆ

ಸರಿಯಾಗಿ ಪರೀಕ್ಷೆ ಮಾಡಿಲ್ಲ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳ ಹೇಳಿಕೆ ಮೇರೆಗೆ ಸುಳ್ಳು ಗಾಯದ ಪ್ರಮಾಣ ಪತ್ರ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು-ಮಡಿಕೇರಿ.